**ಸಾಕ್ಷಿಯನ್ನು ದಿನಾಂಕ 26.09.2022 ರಂದು ಪುನಃ ಕರೆಯಿಸಿ ಪ್ರತಿಜ್ಞಾವಿಧಿ ಭೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿ ಸಂ. 41 ಬಿ,42 ಬಿ, 43,44 ಮತ್ತು 46 ಪರ ಸಿಆರ್ ಬಿ ವಕೀಲರಿಂದ**

**ನನ್ನ ಗಂಡನ ಹೆಸರು ದೊಡ್ಡಯ್ಯ. ನನ್ನ ಗಂಡನಿಗೆ ಆರೋಗ್ಯ ಸರಿ ಇದೆ ಆದರೆ ತಿಳುವಳಿಕೆ ಕಡಿಮೆ ಇದೆ. ಪ್ರಸ್ತುತ ದಾವೆಯನ್ನು ದೊಡ್ಡಯ್ಯ ಹಾಕಿದ್ದಾನೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ನಾನು, ನನ್ನ ಮಕ್ಕಳು ಮಾತನಾಡಿಕೊಂಡು ಈ ದಾವೆ ಸಲ್ಲಿಸಿದ್ದೇವೆ ಎನ್ನುತ್ತಾರೆ. ನನ್ನ ತವರು ಮನೆ ಕೊರಟಗೆರೆ ತಾಲ್ಲೂಕಿನಲ್ಲಿದೆ.** ನನ್ನ ಮದುವೆಯಾಗಿ ಸುಮಾರು 30 ವರ್ಷ ಆಗಿದೆ. ನನ್ನ ಮದುವೆಗಿಂತ ಮೊದಲು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವೆಲ್ಲಾ ವ್ಯವಹಾರಗಳಾಗಿವೆ ಎಂಬುದು ಗೊತ್ತಿಲ್ಲ. ನನ್ನ ಮಾವನ ಹೆಸರು ಹನುಮಯ್ಯ. ನನ್ನ ಮದುವೆಯಾದಾಗ ನನ್ನ ಮಾವ ಜೀವಂತವಿರಲಿಲ್ಲ. ನನ್ನ ಮಾವನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣುಮಗಳಿದ್ದಾಳೆ ಅವಳ ಹೆಸರು ಜಯಮ್ಮ ಅವರು ತುರುವೆಕೆರೆಯಲ್ಲಿದ್ದಾರೆ. ಜಯಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರಳಿಲ್ಲ ಎಂದರೆ ಸರಿ. ರಾಮದಾಸಪ್ಪ ನನ್ನ ಮಾವನ ತಮ್ಮನಿದ್ದಾನೆ. ನನ್ನ ಮಾವ ಹನುಮಯ್ಯನ ತಂದೆಯ ಹೆಸರು ಚಿಕ್ಕಣ್ಣ. ಸದರಿ ಚಿಕ್ಕಣ್ಣನಿಗೆ ಹನುಮಯ್ಯ ಮತ್ತು ರಾಮದಾಸಪ್ಪ ಎಂಬ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳಿದ್ದಳು ಆದರೆ ನನಗೆ ಆಕೆಯ ಹೆಸರು ಗೊತ್ತಿಲ್ಲ ಮತ್ತು ಆಕೆಗೆ ಮಕ್ಕಳಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಅವಳಿಗೆ ಮಕ್ಕಳಿದ್ದ ಬಗ್ಗೆ ನಾನು ತಿಳಿದುಕೊಂಡಿಲ್ಲ. ಚಿಕ್ಕಣ್ಣನಿಗೆ 3 ಜನ ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ ನಾಲ್ಕು ಜನ ಅಣ್ಣತಮ್ಮಂದಿರು. ಚಿಕ್ಕಣ್ಣ ಮತ್ತು ಅವನ ಅಣ್ಣತಮ್ಮಂದಿರ ತಂದೆಯ ಹೆಸರು ಚಿಕ್ಕೇರಿ ಸಂಜೀವಯ್ಯ ಎಂದರೆ ಸರಿ. ನನ್ನ ಮಾವನ ಅಪ್ಪ ಚಿಕ್ಕಣ್ಣ ಮತ್ತು ಅವರ ಅಣ್ಣತಮ್ಮಂದಿರನ್ನು ನಾನು ನೋಡಿಲ್ಲ. ಭೀಮಯ್ಯನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ದೊಡ್ಡಯ್ಯನವರಿಗೆ ಐದು ಜನ ಮಕ್ಕಳು ಎಂದರೆ ಸರಿ. ಹನುಮಂತಯ್ಯ ತಂದೆ ಚಿಕ್ಕೇರಿ ಸಂಜೀವಯ್ಯನಿಗೆ ಒಟ್ಟು ಆರು ಜನ ಮಕ್ಕಳು ಎಂದರೆ ಸರಿ. ಸದರಿ ಹನುಮಂತಯ್ಯನ ಮಕ್ಕಳು ಸಂಜೀವಯ್ಯ, ಭೀಮಯ್ಯ, ದೊಡ್ಡಯ್ಯ, ಚಿಕ್ಕಣ್ಣ, ಹನುಮಂತಯ್ಯ ಮತ್ತು ರಾಮಯ್ಯ ಎಂದರೆ ಸರಿ. ಚಿಕ್ಕೇರಿ ಸಂಜೀವಯ್ಯನ ಅಣ್ಣತಮ್ಮಂದಿರು ಸುಮಾರು 80 ವರ್ಷಗಳಿಂದ ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿ. ಬಹಳ ವರ್ಷಗಳ ಹಿಂದೆ ಭೀಮಯ್ಯನವರು ತೀರಿಕೊಂಡಿದ್ದಾರೆ ಎಂದರೆ ಸರಿ. ದೊಡ್ಡಯ್ಯ ಎಂಬುವವರು ಕೂಡ ಬಹಳ ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ಸರಿ. ಭೀಮಯ್ಯ, ದೊಡ್ಡಯ್ಯ ತೀರಿಕೊಂಡ ನಂತರ ನನ್ನ ಮಾವನ ಅಪ್ಪ ಹನುಮಂತಯ್ಯ ಮತ್ತು ಭೀಮಯ್ಯ

ಮತ್ತು ದೊಡ್ಡಯ್ಯನ ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿ. ದಿನಾಂಕಃ 04.02.1952 ರಂದು ಭೀಮಯ್ಯ ಹಾಗೂ ದೊಡ್ಡಯ್ಯನ ಮಕ್ಕಳುಗಳು ಮತ್ತು ನನ್ನ ಮಾವನ ತಂದೆ ಚಿಕ್ಕಣ್ಣಯ್ಯ ಹಾಗೂ ಹನುಮಂತಯ್ಯ ಅವರು ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿ. ಸದರಿ ವಿಭಾಗದಂತೆ ಅವರ ಆಸ್ತಿ ಒಟ್ಟು ನಾಲ್ಕು ವಿಭಾಗಗಳಾದವು ಎಂದರೆ ಸರಿ. ಆ ವಿಭಾಗ ಪತ್ರದಂತೆ ನನ್ನ ಮಾವನ ತಂದೆಗೆ ಗುಬ್ಬಿ ಕಸಬಾ ಸರ್ವೆ ನಂ. 54/1 ರಲ್ಲಿ 3 ಎಕರೆ 20 ಗುಂಟೆ, ಸರ್ವೆ ನಂ. 54/2 ರಲ್ಲಿ 22 ಗುಂಟೆ, ಸರ್ವೆ ನಂ. 194 ರಲ್ಲಿ 16 ಗುಂಟೆ, ಗುಬ್ಬಿ ಅಮಾನಿಕೆರೆ ಸರ್ವೆ ನಂ. 28 ರಲ್ಲಿ 13 ಗುಂಟೆ ಮತ್ತು ಎನ್ ಮತ್ತಿಗಟ್ಟಿದ ಸರ್ವೆ ನಂ. 128 ರಲ್ಲಿ 1 ಎಕರೆ ಹಾಗೂ ಗುಬ್ಬಿಯಲ್ಲಿರುವ ಮನೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ನಂತರ ನನ್ನ ಮಾವನ ತಂದೆ ತನ್ನ ಪಾಲಿಗೆ ಬಂದ ಆಸ್ತಿಗಳ ಪ್ರತ್ಯೇಕ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿ. ಚಿಕ್ಕಣ್ಣನ ಮಕ್ಕಳಾದ ಹನುಮಯ್ಯ ಮತ್ತು ರಾಮದಾಸಪ್ಪ ತಮ್ಮ ತಂದೆಯ ಜೊತೆ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿ. ರಾಮದಾಸಪ್ಪನ ಮಗ ರಾಜಶೇಖರ ಎಂದರೆ ಸರಿ. 39 ನೇ ಪ್ರತಿವಾದಿ ಸಂಜೀವಯ್ಯನವರು ನನ್ನ ಗಂಡನ ಅಣ್ಣ ಇದ್ದಾರೆ. ಕೆಂಪಮ್ಮ ನಮ್ಮ ಅತ್ತೆ ಎಂದರೆ ಸರಿ. 1952 ರ ವಿಭಾಗ ಪತ್ರದಂತೆ ಹನುಮಯ್ಯ ಮತ್ತು ರಾಮದಾಸಪ್ಪ ತಮ್ಮ ತಂದೆಯ ಪಾಲಿಗೆ ಬಂದ ಆಸ್ತಿಯ ವಾರಸುದಾರರಾಗಿ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿ. ಹನುಮಯ್ಯ ಮತ್ತು ರಾಮದಾಸಪ್ಪನವರು ತೀರಿಹೋದ ನಂತರ ಅವರ ಮಕ್ಕಳು ಅವರ ಪಾಲಿನ ಆಸ್ತಿಯ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿ. 41 ರಿಂದ 46 ನೇ ಪ್ರತಿವಾದಿಯರ ತಂದೆ ಹನುಮಂತಯ್ಯನವರ ಭಾಗಕ್ಕೆ 1952 ರ ವಿಭಾಗದಂತೆ ಗುಬ್ಬಿ ಕಸಬಾ ಸರ್ವೆ ನಂ. 54/1 ರಲ್ಲಿ 3 ಎಕರೆ 20 ಗುಂಟೆ , 52/4 ರಲ್ಲಿ 22 ಗುಂಟೆ, ಸರ್ವೆ ನಂ.54 ರಲ್ಲಿ 16 ಗುಂಟೆ, ಗುಬ್ಬಿ ಕಸಬಾ ಸರ್ವೆ ನಂ. 194 ರಲ್ಲಿ 5 ಗುಂಟ ಸರ್ವೆ ನಂ. 195 ರಲ್ಲಿ 11 ಗುಂಟೆ ಒಟ್ಟು 16 ಗುಂಟೆ ಜಮೀನು ಮತ್ತು ಅಮಾನಿಕೆರೆ ಸರ್ವೆ ನಂ. 28 ರಲ್ಲಿ 13 ಗುಂಟೆ ಮತ್ತು ಎನ್ ಮತ್ತಿಘಟ್ಟ ಗ್ರಾಮದ ಸರ್ವೆ ನಂ. 128 ರಲ್ಲಿ 1 ಎಕರೆ ಮತ್ತು ಗುಬ್ಬಿಯಲ್ಲಿರುವ ಮನೆ ಬಂದಿತ್ತು ಮತ್ತು ಅವರು ಸ್ವಾಧೀನದಲ್ಲಿದ್ದರು ಎಂದರೆ ಸರಿ. ಹನುಮಂತಯ್ಯನ ಮರಣದ ನಂತರ 41 ರಿಂದ 46 ನೇ ಪ್ರತಿವಾದಿಯರು ಹನುಮಂತಯ್ಯನ ಭಾಗಕ್ಕೆ ಬಂದ ಆಸ್ತಿಯ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿ. ಭೀಮಯ್ಯನ ಬಿನ್ ಚಿಕ್ಕೇರಿ ಸಂಜೀವಯ್ಯ ಮಕ್ಕಳಿಗೂ ಸಹ 1952 ರ ವಿಭಾಗ ಪತ್ರದಲ್ಲಿ ಪಾಲು ಬಂದಿದೆ ಎಂದರೆ ಸರಿ. ದೊಡ್ಡಯ್ಯ ಬಿನ್ ಚಿಕ್ಕೇರಿ ಸಂಜೀವಯ್ಯ ರವರ ಮಕ್ಕಳಿಗೂ ಸಹ 1952 ರ ವಿಭಾಗಪತ್ರದಲ್ಲಿ ಪಾಲು ಬಂದಿದೆ ಎಂದರೆ ಸರಿ. 1952

ನೇ ಇಸವಿಯಿಂದ ಚಿಕ್ಕೇರಿ ಸಂಜೀವಯ್ಯನ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮೊಮ್ಮಕ್ಕಳು ಎಲ್ಲರೂ ತಮ್ಮ ತಮ್ಮ ಆಸ್ತಿಗಳ ಸ್ವಾಧೀನದಲ್ಲಿದ್ದಾರೆಂದರೆ ಸರಿ.

(ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ/-

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,

ಗುಬ್ಬಿ.